**ಸಾಕ್ಷಿಯನ್ನು ದಿಃ *11/03/2025* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲು ಃ ಶ್ರೀ ಬಿಡಿಎನ್.ವಕೀಲರಿಂದ ಆರೋಪಿ ಪರವಾಗಿ.**

ನಾನು ಬಿ.ಎ ಪದವಿಧರ. ನಾನು ಕಳೆದ ಮೂರು ವರ್ಷಗಳಿಂದ ಫಿರ್ಯಾದಿದಾರರ ಸೊಸೈಟಿಯಲ್ಲಿ ಬ್ರ್ಯಾಂಚ ಮ್ಯಾನೇಜರಾಗಿ ಕೆಲಸ ಮಾಡುತ್ತಿದ್ದೇನೆ. ಇದಕ್ಕಿಂತ ಮುಂಚಿತವಾಗಿ ಖಾಸಗಿ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದೆ. ನಮ್ಮ ಸೊಸೈಟಿ ಕೋ-ಆಫ್ ಸೊಸೈಟಿ ಆ್ಯಕ್ಟಗೆ ಒಳಪಟ್ಟಿದ್ದು ಮತ್ತು ನೊಂದಣಿ ಆಗಿರುವ ಸೊಸೈಟಿ ಎಂದರೆ ನಿಜ. ಸೊಸೈಟಿಯ ಬೋರ್ಡ ಆಫ್ ಡೈರಕ್ಟರ ಕುರಿತು ನನಗೆ ಎಲ್ಲ ಮಾಹಿತಿ ಇದೆ.

ಆರೋಪಿತರು ನಾನು ಸೊಸೈಟಿಯಲ್ಲಿ ಕೆಲಸ ಮಾಡುವ ಪೂರ್ವದಲ್ಲಿ ಸಾಲ ಪಡೆದಿರುತ್ತಾರೆ. ಆದ್ದರಿಂದ ಸದರಿ ಸಾಲದ ಕುರಿತು ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ನಿಜ. ನನಗಿಂತ ಪೂರ್ವ ನನ್ನ ಮುಂಚಿತ ಬ್ರ್ಯಾಂಚ ಮ್ಯಾನೇಜರಗೆ ಸದರಿ ಪ್ರಕರಣ ನೋಡಿಕೊಳ್ಳಲು ಪರವಾನಿಗೆ ನೀಡಿದ್ದರು. ಸದರಿಯವರು ಫಕ್ಕೀರಗೌಡ ಎಂದರೆ ನಿಜ. ನಿ.ಪಿ.10 ರಂತೆ ಅಧಿಕಾರ ಪತ್ರದ ಪ್ರಕಾರ ಬೋರ್ಡ ಆಫ್ ಡೈರಕ್ಟರ ಆರೋಪಿತರ ವಿರುದ್ದ ಪ್ರಸ್ತುತ ಪ್ರಕರಣ ಮುಂದುವರೆಸಬೇಕೆಂದು ಅಧಿಕಾರ ನೀಡಿರುವುದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿದಾರರು ಅದನ್ನು ನೋಡಿ ಆ ರೀತಿ ಇಲ್ಲ ಆದರೆ ಚಾಲ್ತಿಯಿರುವ ಎಲ್ಲ ಕೇಸುಗಳನ್ನು ನಡೆಸಲು ಸೊಸೈಟಿ ಪರವಾಗಿ ಪರವಾನಿಗೆ ನೀಡಿರುತ್ತಾರೆ ಎಂದು ಉತ್ತರಿಸುತ್ತಾರೆ. ಸದರಿ ಅಧಿಕಾರ ಪತ್ರದಲ್ಲಿ ಮೊದಲು ಫಕ್ಕೀರಗೌಡ ಇವರಿಗೆ ಅಧಿಕಾರ ನೀಡಿದ್ದು, ನಂತರ ನನಗೆ ಅದನ್ನು ವರ್ಗಾಯಿಸಿದ್ದು ಎಂದು ಬರೆದಿಲ್ಲ ಮತ್ತು ಪ್ರಸ್ತುತ ಪ್ರಕರಣದ ನಂಬರ ಸಹ ಬರೆದಿರುವುದಿಲ್ಲ ಎಂದರೆ ನಿಜ. ಈ ರೀತಿ ಇರುವಾಗ ಸದರಿ ಪ್ರಕರಣ ಮುಂದುವರೆಸಲು ನನಗೆ ಯಾವುದೇ ರೀತಿ ಅಧಿಕಾರವಿಲ್ಲ ಮತ್ತು ಸಾಕ್ಷ್ಯ ನುಡಿಯಲು ಸಹ ಬರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಅಧಿಕಾರ ಪತ್ರದಲ್ಲಿ ಸಭೆ ನಡೆಸಿದ್ದು, ಅನುಮೋದನೆ ಮಾಡಿದ್ದು, ನಡುವಳಿ ಬರೆದಿದ್ದು ಮತ್ತು ಅಧಿಕಾರಿಗಳ ಸಹಿಗಳು ಯಾವುದು ಇರುವುದಿಲ್ಲ ಎಂದರೆ ನಿಜ. ಸದರಿ ನಿ.ಪಿ.10 ನಾನು ಪ್ರಮಾಣಪತ್ರ ಸಲ್ಲಿಸಿದ ದಿನಾಂಕದಂದು ಇರುವುದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿದಾರರು ಅದಕ್ಕಿಂತ ಮುಂಚಿತವಾಗಿ ಇರುತ್ತದೆ ಎಂದು ಉತ್ತರಿಸುತ್ತಾರೆ.

ಆರೋಪಿತರು ನಮ್ಮ ಸೊಸೈಟಿಗೆ ಯಾವ ದಿನಾಂಕದಂದು ಬಂದಿರುತ್ತಾರೆ ಎಂದು ನಮ್ಮ ರಜಿಸ್ಟರ ನೋಡಿ ಹೇಳಬಹುದು.

***ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲು ಆರೋಪಿ ಪರ ವಕೀಲರ ಮನವಿಯ ಮೇರೆಗೆ ಮುಂದೂಡಲಾಯಿತು.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

1ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ,
ಧಾರವಾಡ.